ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮಹದಾಯಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 21/02/2020

# ಮಹದಾಯಿ: ಹೋರಾಟಗಾರರಲ್ಲಿ ಸಂತಸ

## ಹೋರಾಟ ಮಾತ್ರ ನಿಲ್ಲೋದಿಲ್ಲ | ಹೆಚ್ಚುವರಿ ನೀರಿಗಾಗಿ ಮುಂದಿನ ಹೆಜ್ಜೆ

## ಖುಷಿ ನಡುವೆಯೂ ಖಡಕ್ ಎಚ್ಚರಿಕೆ ರವಾನಿಸಿದ ಹೋರಾಟಗಾರರು

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಮಹದಾಯಿ ನೀರಿಗಾಗಿ ಅನ್ನದಾತರು ದಶಕಗಳಿಂದ ನಡೆಸಿದ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಂತಾಗಿದೆ. ನ್ಯಾಯಸಮ್ಮತವಾಗಿ ದೊರೆಯಬೇಕಿದ್ದ ನಮ್ಮ ನೀರು ನಮಗೆ ಕೊಡಿ ಎಂದು ಕೇಳುತ್ತಿದ್ದ ರೈತರಿಗೆ ಸಿಕ್ಕಿದ್ದ ಬರೀ ಲಾಠಿ ಏಟು. ಹರಿಸಿದ್ದು ರೈತರ ನೆತ್ತರು. ಆದರೆ ಇದೀಗ ಸುಪ್ರೀಂಕೋರ್ಟ್ ಕೂಡಲೇ ಅಧಿಸೂಚನೆ ಹೊರಡಿಸಿ ಎಂದು ಸೂಚನೆ ನೀಡಿದ್ದು ನೆತ್ತರು ಹರಿಸಿಕೊಂಡ ರೈತರ ಮೊಗದಲ್ಲಿ ಸಂತಸದ ಹೊನಲು ಹರಿಸಿದೆ. ಇಷ್ಟು ದಿನಗಳ ಬಳಿಕವಾದರೂ ನಮ್ಮ ಹೋರಾಟಕ್ಕೆ ಜಯ ಸಿಕ್ಕಂತೆ ಆಯಿತಲ್ಲ ಎಂದು ನಿಟ್ಟುಸಿರು ಬಿಡುವಂತಾಗಿದೆ.

ಈ ಹೋರಾಟಕ್ಕೆ ದಶಕಗಳ ಇತಿಹಾಸವಿದೆ. ಆದರೆ ತೀವ್ರತೆ ಪಡೆದಿದ್ದು 2015ರ ಜುಲೈ 15ಕ್ಕೆ. ಅಂದು ಆರಂಭವಾದ ಹೋರಾಟ ಇದೀಗ 1680ನೆಯ ದಿನದಲ್ಲಿ ಮುನ್ನಡೆಯುತ್ತಿದೆ. ಇನ್ನು ನವಲಗುಂದದಲ್ಲಿ 2015ರ ಜುಲೈ 25ರಿಂದ ಹೋರಾಟ ಪ್ರಾರಂಭವಾಯಿತು.

ಹೋರಾಟಕ್ಕೆ ತೀವ್ರತೆ ಕೊಟ್ಟು ರಾಜ್ಯ, ದೇಶದ ಗಮನ ಸೆಳೆದವರು 'ಕರ್ನಾಟಕ ರೈತ ಸೇನೆ'ಯ ರಾಜ್ಯಾಧ್ಯಕ್ಷ ವೀರೇಶ್ ಸೊಬರದಮಠ. ಹೋರಾಟದ ಸಲುವಾಗಿಯೇ ಸನ್ಯಾಸತ್ವ ಸ್ವೀಕರಿಸಿದ್ದ ಇವರೊಂದಿಗೆ ಶಂಕ್ರಪ್ಪ ಅಂಬಲಿ, ಪರಶುರಾಮ ಜಂಬಗಿ, ವಸಂತ ಸೀತಣ್ಣವರ, ರಾಘವೇಂದ್ರ ಗುಜಮಾಗಡಿ ಮತ್ತಿತರರು ಸಾಥ್ ನೀಡಿದ್ದಾರೆ.

**ನಿರಂತರ ಹೋರಾಟ:** ಈ ಹೋರಾಟದಲ್ಲಿ ಪಾಲ್ಗೊಂಡ 10 ರೈತರು ಸಾವಿಗೀಡಾಗಿದ್ದಾರೆ. ಇದರಲ್ಲಿ ನಾಲ್ವರು ಪೊಲೀಸರ ಲಾಠಿ, ದೌರ್ಜನ್ಯಕ್ಕೆ ಬಲಿಯಾಗಿದ್ದರೆ, ಇನ್ನು ಮೂವರು ಹೃದಯಾಘಾತಕ್ಕೆ, ಮತ್ತೆ ಒಬ್ಬ ಹೋರಾಟದ ವೇದಿಕೆಯಲ್ಲಿ ಉಂಟಾದ ನೂಕು ನುಗ್ಗಾಟ, ಕಾಲ್ತುಳಿತಕ್ಕೆ, ಮತ್ತೆ ಇಬ್ಬರು ಪಾದಯಾತ್ರೆ ನಡೆಸುವಾಗ ನಡೆದ ರಸ್ತೆ ಅಪಘಾತಕ್ಕೆ ಬಲಿಯಾಗಿದ್ದುಂಟು.

ಇಷ್ಟು ದಿನಗಳ ಕಾಲ ರಾಜಕಾರಣಿಗಳಿಗೆ ಮಾತ್ರ ಇದೊಂದು ಚದುರಂಗದಾಟವೇ ಆದಂತಾಗಿತ್ತು. ಕೊನೆಗೆ ನ್ಯಾಯಾಧಿಕರಣ ತೀರ್ಪು ನೀಡಿದರೂ ಕೇಂದ್ರ ಸರ್ಕಾರ ಅಧಿಸೂಚನೆಯನ್ನೂ ಹೊರಡಿಸಿರಲಿಲ್ಲ. ಕೊನೆಗೆ ಸಮಸ್ಯೆ ಸುಪ್ರೀಂಕೋರ್ಟ್‌ನಿಂದಲೇ ಬಗೆಹರಿದಿರುವುದರಿಂದ ಹೋರಾಟಗಾರರು ಖುಷಿಯಾಗಿದ್ದಾರೆ.

# ಬಿಜೆಪಿಗೆ ಮಹದಾಯಿ ನಿಟ್ಟುಸಿರು

## ನಾಯಕರ ಪಾಲಿಗೆ ಬಿಸಿ ತುಪ್ಪವಾಗಿದ್ದ ಜಲ ವಿವಾದ

ಬೆಂಗಳೂರು: ಮಹದಾಯಿ ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಾಧಿಕರಣದ ಐತೀರ್ಪಿನ ಅಧಿಸೂಚನೆ ಹೊರಡಿಸಲು ಸುಪ್ರೀಂಕೋರ್ಟ್ ಸೂಚನೆ ಹೊರಬಿದ್ದ ಬೆನ್ನಲ್ಲೇ ರಾಜ್ಯದ ಆಡಳಿತಾರೂಢ ಬಿಜೆಪಿ ನಾಯಕರು ನಿಟ್ಟುಸಿರು ಬಿಟ್ಟಿದ್ದಾರೆ.

ಪ್ರತಿಬಾರಿ ಬಿಜೆಪಿ ನಾಯಕರು ಮುಂಬೈ ಕರ್ನಾಟಕ ಭಾಗದಲ್ಲಿ ಪಕ್ಷದ ಸಭೆ-ಸಮಾರಂಭಗಳನ್ನು ಹಮ್ಮಿಕೊಂಡಾಗಲೆಲ್ಲ ಮಹದಾಯಿ ವಿಷಯ ಪ್ರಸ್ತಾಪವಾಗಿ ಪ್ರತಿಪಕ್ಷಗಳ ಟೀಕೆಗಳಿಗೆ ಆಹಾರವಾಗುತ್ತಿದ್ದರು.

ಕೇಂದ್ರದಲ್ಲಿ ಬಿಜೆಪಿಯ ಪೂರ್ಣ ಬಹುಮತದ ಸರ್ಕಾರವಿದೆ. ರಾಜ್ಯದಲ್ಲೂ ಬಿಜೆಪಿ ಸರ್ಕಾರವಿದೆ. ನೆರೆಯ ಗೋವಾದಲ್ಲೂ ಬಿಜೆಪಿಯದ್ದೇ ಆಡಳಿತ. ಹೀಗಿದ್ದರೂ ಮಹದಾಯಿ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕೆ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂಬ ಆರೋಪ ಸಾಮಾನ್ಯವಾಗಿ ಕೇಳಿಬರುತ್ತಿತ್ತು. ಈ ಕಾರಣಕ್ಕಾಗಿಯೇ ಬಿಜೆಪಿ ವಿರುದ್ಧ ಹಲವು ಹಂತದ ಹೋರಾಟಗಳೂ ನಡೆದಿದ್ದವು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರದ ಸಚಿವರು ಅಥವಾ ಪಕ್ಷದ ರಾಷ್ಟ್ರೀಯ ನಾಯಕರು ಹುಬ್ಬಳ್ಳಿ-ಧಾರವಾಡ ಭಾಗಕ್ಕೆ ಭೇಟಿ ನೀಡಿದಾಗಲೆಲ್ಲ ಮಾಧ್ಯಮ ಪ್ರತಿನಿಧಿಗಳಿಂದಲೂ



ಈ ಪ್ರಶ್ನೆ ಎದುರಾಗುತ್ತಿತ್ತು. ಹಲವು ಬಾರಿ ಉತ್ತರಿಸಲು ಪರದಾಡುವಂತಾಗುವುದು ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಇದೀಗ ಆ ಎಲ್ಲದಕ್ಕೂ ಮುಕ್ತಿ ಸಿಕ್ಕಂತಾಗಿದೆ.

ಇನ್ನು ಮುಂದೆ ಬಿಜೆಪಿ ನಾಯಕರು ಹುಬ್ಬಳ್ಳಿ-ಧಾರವಾಡ ಸೇರಿದಂತೆ ಮುಂಬೈ ಕರ್ನಾಟಕ ಪ್ರದೇಶದಲ್ಲಿ ನಿಶ್ಚಿಂತೆಯಿಂದ ಪ್ರವಾಸಕ್ಕೆ ಗೊಳ್ಳಬಹುದಾಗಿದೆ. ಮಹದಾಯಿ ವಿಷಯವಾಗಿ ಯಾರಾದರೂ ಪ್ರಸ್ತಾಪ ಮಾಡಿದರೂ ಅದಕ್ಕೆ ಪ್ರತಿಕ್ರಿಯೆ ನೀಡಬಹುದಾಗಿದೆ. ಅಷ್ಟರಮಟ್ಟಿಗೆ ಸುಪ್ರೀಂಕೋರ್ಟ್‌ನ ಸೂಚನೆ ನಿರಾಳತೆ ತಂದಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ನಮ್ಮ ಕೂಗು ಮಾತ್ರ ಆಡಳಿತ ನಡೆಸುವವರಿಗೆ ಕೇಳಿಸಲೇ ಇಲ್ಲ. ಇದೀಗ ಸುಪ್ರೀಂ ಕೋರ್ಟ್‌ಗೆ ನಮ್ಮ ಕೂಗು ಕೇಳಿಸಿದೆ. ಇದು ನಮಗೆ ಬಹಳ ಸಂತಸವಾಗಿದೆ.

• **ವೀರೇಶ ಸೊಬರದಮಠ**
ಅಧ್ಯಕ್ಷರು, ರೈತಸೇನೆ

ನಮ್ಮ ಹೋರಾಟ ಮಾತ್ರ ನಿಲ್ಲದು. ನಮಗೆ ಬರಬೇಕಿರುವ ಹೆಚ್ಚುವರಿ ನೀರಿಗಾಗಿ ನಾವು ಹೋರಾಟವನ್ನು ಮುಂದುವರಿಸುತ್ತೇವೆ. ಇದಕ್ಕಾಗಿ ಎಷ್ಟು ವರ್ಷ ಬೇಕಾದರೂ ಹೋರಾಟ ಮಾಡಲು ಸಿದ್ಧ.

• **ಸುಭಾಸಚಂದ್ರಗೌಡ ಪಾಟೀಲ**
ನವಲಗುಂದ ಹೋರಾಟಗಾರ